

ಕಾಡೆಂದರೆ 'ಹಸಿರು' ಎಂದುಕೊಂಡ ನನಗೆ ಮತ್ತು ಮೋಹನ್‌ಗೆ ಈ ಅರಿಶಿನ ಬಣ್ಣದ ಸಸ್ಯವಾಟಿಕೆಯ ಸನ್ನಿಧಿ ನಿಜಕ್ಕೂ ಬೆರಗುಗೊಳಿಸಿದ ಸುಂದರ ಕ್ಷಣ. ನಾವಲ್ಲಿಗೆ ಹೋದಾಗ, (ಎರಡು ವರ್ಷಗಳ ಹಿಂದೆ) ಚಳಿಗಾಲ ಆಗಷ್ಟೇ ಶುರುವಾಗಿದ್ದವು. ಅಮೆರಿಕಾದ ಸೇಂಟ್ ಲೂಯಿಯ ಇಂಗರ್‌ವುಡ್ ಅರಣ್ಯವದು. ಶಾ ನೇಚರ್ ರಿಸರ್ವ್ ಎಂದದರ ಹೆಸರು.

ಅದು ಶೀತವಲಯ ಪ್ರದೇಶ. ಅಲ್ಲಿ, ಉಷ್ಣವಲಯ ಪ್ರದೇಶದಲ್ಲಿ ಇರುವಂತೆ ಸಾವಿರಾರು ಜಾತಿಯ ಸಸ್ಯ ಪ್ರಬೇಧಗಳಿಲ್ಲ. ವೈವಿಧ್ಯತೆಯ ದೃಷ್ಟಿಯಿಂದ ಈ ಅರಣ್ಯ ನಗಣ್ಯವೇ. ನಮ್ಮಲ್ಲಿರುವ ಹಾಗೆ ಪೊದೆ, ಬಳ್ಳಿ, ಮುಳ್ಳು–ಕಂಟಿಗಳೂ ಅಲ್ಲಿಲ್ಲ. ಎಷ್ಟು ಕತ್ತು ಎತ್ತರಿಸಿ ನೋಡಿದರೂ ಒಂದೇ ರೀತಿಯ, ಉದ್ದುದ್ದ ಮರಗಳು. ಕರಿ, ಓಕ್ಸ್, ಮೇಪಲ್ ಮುಂತಾಗಿ ಕೇವಲ ಬೆರಳೆಣಿಕೆಯಷ್ಟು ಪ್ರಬೇಧಗಳು. ಪ್ರಾಣಿ– ಪಕ್ಷಿ, ಕ್ರಿಮಿ–ಕೀಟಗಳೂ ಕಡಿಮೆ. ಇದೂ ಒಂದು ರೀತಿಯ ವೈವಿಧ್ಯವೇ!

ಅಲ್ಲಿಂದೀಚೆಗೆ ಎಲ್ಲೇ ಕಾಡು ನೋಡಿದರೂ, ಆ ಕಾಡು ಎಷ್ಟೇ ಹಸಿರಾಗಿದ್ದರೂ ನನಗೆ ಅವತ್ತು ಕಂಡ ಪೀತವರ್ಣದ ಪರ್ಣ ಪ್ರಪಂಚವೇ ನೆನಪಾಗುತ್ತದೆ. ಕಂಡದ್ದನ್ನು ಕ್ಯಾಮರಾದಲ್ಲಿ ಸೆರೆ ಹಿಡಿದದ್ದು ಇಲ್ಲಿದೆ. ನಿಮ್ಮ ಮನಸ್ಸಿನಲ್ಲೂ ಸೆರೆ ಹಿಡಿದುಕೊಳ್ಳಿ!

